AUGUST 30, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಂದ, 106 ಜನ ಪೊಲೀಸ್ ಸಿಬ್ಬಂದಿಗೆ, ಇಂದು, ರಾಷ್ಟ್ರಪತಿ ಹಾಗೂ ಕೇಂದ್ರ ಗೃಹ ಸಚಿವರ, ಪದಕ ಪ್ರದಾನ.**

- **ಪ್ರಧಾನಮಂತ್ರಿ ಜನ ಧನ ಯೋಜನೆ; ಫಲಾನುಭವಿ ಬ್ಯಾಂಕ್ ಉಳಿತಾಯ ಖಾತೆಗೆ, ನೇರ ನಗದು ವರ್ಗಾಯಿಸಲು, ಸಹಕಾರಿ.**

- **ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ, ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಪಟಾಕಿ ಅವಘಡ; ಓರ್ವ ಬಾಲಕ ಸಾವು; 10 ಜನರಿಗೆ  ಗಾಯ.**

- **ಆಕಾಶವಾಣಿಯ ಮನ್ ಕಿ ಬಾತ್; ನಾಳೆ 11 ಗಂಟೆಗೆ, ಪ್ರಧಾನಮಂತ್ರಿ ಅವರಿಂದ, ಮನದ ಮಾತು.**

<><><>

**ಈಗ ವಾರ್ತೆಗಳ ವಿವರ**

<><><>

**ಅತ್ಯುತ್ತಮ ಸೇವೆ ಸಲ್ಲಿಸಿದ, ರಾಜ್ಯದ 78 ಜನ ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ ಹಾಗೂ 28 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ, ಕೇಂದ್ರ ಗೃಹ ಖಾತೆ ಸಚಿವರ, ಪದಕಗಳನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಇಂದು ಬೆಳಗ್ಗೆ 10.45 ಕ್ಕೆ, ಬೆಂಗಳೂರಿನ ರಾಜಭವನ ಆವರಣದ, ಗಾಜಿನಮನೆಯಲ್ಲಿ ಪ್ರದಾನಿಸಿ, ಗೌರವಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.**

ಸಚಿವ ಸಂಪುಟದ ಹಿರಿಯ ಸಚಿವರು, ಹಿರಿಯ ಪೊಲೀಸ್ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

<><><>

ರಾಜ್ಯ ನ್ಯಾಯ ಪ್ರಾಧಿಕಾರಗಳ 'ಪದಾಧಿಕಾರಿಗಳ' ಸಮಾವೇಶ, ಇಂದು ಬೆಳಗ್ಗೆ 11 ಗಂಟೆಗೆ, ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ ಜರುಗಲಿದೆ. ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಕಿರಣ್ ರಿಜಿಜು ಪಾಲ್ಗೊಳ್ಳಲಿದ್ದಾರೆ.

<><><>

ಮಿಶ್ರ ಬೆಳೆ ಬೇಸಾಯದ ಜೊತೆಗೆ, ಕುರಿ, ಕೋಳಿ ಸಾಕಾಣಿಕೆ ಕೈಗೊಂಡು, ರೈತರ ಆದಾಯ ಮತ್ತು ಜೀವನದ ಗುಣಮಟ್ಟ ಹೆಚ್ಚಿಸಲು, ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು, ಕೇಂದ್ರ ಕೃಷಿ ಖಾತೆ ಸಚಿವ, ಶಿವರಾಜ ಸಿಂಗ್ ಚೌವ್ಹಾಣ ತಿಳಿಸಿದ್ದಾರೆ. ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲೂಕು, ವರಕೂಡು ಗ್ರಾಮಕ್ಕೆ ಭೇಟಿ ನೀಡಿ, ರೈತರ ಜೊತೆ, ಸಂವಾದ ನಡೆಸಿದರು.

<><><>

ಕೇಂದ್ರದ ಯೋಜನೆಗಳನ್ನು, ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ, ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ ಎಂದು, ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ, ಹೇಳಿದ್ದಾರೆ. ಕೇಂದ್ರ ವಾರ್ತಾ ಶಾಖೆ, ಯಾದಗಿರಿಯಲ್ಲಿ ಮಾಧ್ಯಮದವರಿಗಾಗಿ ಆಯೋಜಿಸಿದ್ದ, 'ವಾರ್ತಾಲಾಪ' ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ಕೇಂದ್ರ ವಾರ್ತಾ ಶಾಖೆಯ, ಬೆಂಗಳೂರು ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ. ರವೀಂದ್ರ ಮಾತನಾಡಿ, ಪ್ರಧಾನಮಂತ್ರಿ ಆವಾಸ ಯೋಜನೆ, ಆಯುಷ್ಮಾನ ಭಾರತ ಸೇರಿದಂತೆ, ಆರ್ಥಿಕ ಸೇರ್ಪಡೆ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ, ಸಮಗ್ರ ಮಾಹಿತಿ ಒದಗಿಸುವ, ಉಮಂಗ್ ಅಪ್ಲಿಕೇ ’ನ್ ಸಾರ್ವಜನಿಕರಿಗೆ ಲಭ್ಯವಿದೆ ಎಂದರು.

<><><>

ಗದಗ ಜಿಲ್ಲೆ ಕಡಕೋಳ ಗ್ರಾಮದಲ್ಲಿ ಜರುಗಿದ, ಕೇಂದ್ರದ ಆರ್ಥಿಕ ಸೇರ್ಪಡೆ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳ, ಪರಿಪೂರ್ಣತೆ ಅಭಿಯಾನವನ್ನು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ, ಬೆಂಗಳೂರು ಶಾಖೆಯ, ಸಹಾಯಕ ಮಹಾ ಪ್ರಬಂಧಕ ಸೂರಜ ಉದ್ಘಾಟಿಸಿದರು. ಪ್ರಧಾನಮಂತ್ರಿ ಸುರಕ್ಷಾ ವಿಮೆ, ಜೀವನ ಜ್ಯೋತಿ ವಿಮೆ ಯೋಜನೆ, ಅಟಲ್ ಪಿಂಚಣಿ ಯೋಜನೆಗಳ ಸದುಪಯೋಗ, ಗ್ರಾಮಸ್ಥರು ಪಡೆಯುವಂತೆ ಕೋರಿದರು.

<><><>

ಪ್ರಧಾನಮಂತ್ರಿ ಜನ ಧನ ಯೋಜನೆ ಜಾರಿಗೊಂಡು, 11 ವ ’ರ್ಗಳು ಪೂರ್ಣಗೊಂಡಿವೆ. ಜನ ಧನ ಖಾತೆಯ ಪ್ರಾಮುಖ್ಯತೆ ಹಾಗೂ ನೋ ಯುವರ್ ಕಸ್ಟಮರ್ – ಪುನರ್ ಕೆ.ವೈ.ಸಿ. ಅಗತ್ಯತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬಳ್ಳಾರಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್, ಧಾರವಾಡ ವಿಭಾಗೀಯ ಸಹಾಯಕ ಮಹಾಪ್ರಬಂಧಕ ಉಲ್ಲಾಸ ಗುನಗಾ.

<><><>

ಉಲ್ಲಾಸ ಗುನಗಾ ಧ್ವನಿ 67 ಸೆಕೆಂದುಗಳು

<><><>

‘ಒಂದು ರಾಜ್ಯ, ಒಂದು ಗ್ರಾಮೀಣ ಬ್ಯಾಂಕ್’ ಪರಿಕಲ್ಪನೆಯಡಿ, ವಿಲೀನಗೊಂಡ ಕರ್ನಾಟಕ ಗ್ರಾಮೀಣ ಬ್ಯಾಂಕಿನ, ಹೊಸ ಲಾಂಛನವನ್ನು, ಬ್ಯಾಂಕ್ ಅಧ್ಯಕ್ಷ ಶ್ರೀಕಾಂತ ಭಂಡಿವಾಡ ಧಾರವಾಡದಲ್ಲಿ ಅನಾವರಣಗೊಳಿಸಿದರು. ಈ ಸಂದರ್ಭ ಮಾತನಾಡಿದ ಅವರು, ಕರ್ನಾಟಕ ಗ್ರಾಮೀಣ ಬ್ಯಾಂಕ್, ಒಟ್ಟು 1 ಸಾವಿರದ 750 ಶಾಖೆಗಳನ್ನು ಹೊಂದಿದೆ. ಪ್ರಸ್ತುತ 1 ಲಕ್ಷದ 3 ಸಾವಿರದ 451 ಕೋಟಿ ರೂಪಾಯಿ ವಹಿವಾಟು ನಡೆಸಿದೆ ಎಂದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ, ಮುತ್ತೂರಿನಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಸಂಭವಿಸಿದ ಪಟಾಕಿ ಅವಘಡದಲ್ಲಿ, ಓರ್ವ ಬಾಲಕ ಸಾವನಪ್ಪಿ, 10 ಜನ ಗಾಯಗೊಂಡಿರುವ ಘಟನೆ, ನಿನ್ನೆ ರಾತ್ರಿ ಸಂಭವಿಸಿದೆ. ಸಾವನ್ನಪ್ಪಿದ ಬಾಲಕನನ್ನು 15 ವ ’ಣದ ತನು ೀ ರಾವ್ ಎಂದು ಗುರುತಿಸಲಾಗಿದೆ. ಕರ್ತವ್ಯದಲ್ಲಿದ್ದ ಪೊಲೀಸ್ ಪೇದೆ ಜಾಕಿರ್ ಹುಸೇನ್ ಅವರಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಪವರ್ ಲಿಫ್ಟರ್ ವಾಹನದ ಎಂಜಿನ್ ಬಿಸಿಯಾಗಿ, ಪಟಾಕಿಗಳು ಏಕಾಏಕಿ ಸ್ಫೋಟಗೊಂಡು, ದುರಂತ ಸಂಭವಿಸಿತು ಎಂದು, ಪ್ರಾಥಮಿಕ ವರದಿಗಳು ತಿಳಿಸಿವೆ.

<><><>

ಆಕಾಶವಾಣಿಯ ಬಹುಶ್ರುತ, ‘ಮನ್ ಕಿ ಬಾತ್’ನ 125ನೇ ಆವೃತ್ತಿ, ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ–ವಿದೇಶಗಳಲ್ಲಿರುವ, ಭಾರತೀಯ ರೊಂದಿಗೆ, ತಮ್ಮ ಮನದ ಮಾತು ಹಂಚಿಕೊಳ್ಳಲಿದ್ದಾರೆ.

ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎ.ಐ.ಆರ್. ನ್ಯೂಸ್ ಜಾಲತಾಣ ಹಾಗೂ ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಸಹ ಪ್ರಸಾರವಾಗಲಿದೆ.

<><><>

ಪ್ರಸಕ್ತ ಸಾಲಿನ, ರಾಷ್ಟ್ರೀಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ, ಬೆಂಗಳೂರು, ರಾಜಾಜಿನಗರದ, ರಾಜ್ಯ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ –ಜಿ.ಟಿ.ಟಿ.ಸಿ. ಪ್ರಾಧ್ಯಾಪಕಿ, ಎಂ.ಇ. ರಶಿಕಾ ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಎಂ.ಇ. ರಶಿಕಾ ಧ್ವನಿ 47 ಸೆಕೆಂದುಗಳು

<><><>

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ, ರಾಯಚೂರು ಜಿಲ್ಲೆಯ ಪ್ರವಾಸ ಕೈಗೊಂಡಿದ್ದು, ಸಾರ್ವಜನಿಕರಿಂದ ಸಲ್ಲಿಕೆಯಾದ, 360 ದೂರುಗಳ ಪೈಕಿ, 278 ಅರ್ಜಿಗಳ ವಿಚಾರಣೆ ನಡೆಸಿ, 58 ಅರ್ಜಿಗಳನ್ನು ಪರಿಹರಿಸಿದ್ದಾರೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದ, ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ, ಅವರು ಸಾರ್ವಜನಿಕರ ಅಹವಾಲು ಆಲಿಸಿದರು. ನಾಗರಿಕ ಪ್ರಜ್ಞೆ ಜಾಗ್ರತ ಗೊಂಡಲ್ಲಿ, ಭ್ರಷ್ಟಾಚಾರ ಪಿಡುಗು ಕೊನೆಯಾಗಲಿದೆ. ಸಾರ್ವಜನಿಕರು ಆಮಿಷಗಳಿಗೆ ಒಳಗಾಗಬಾರದು ಎಂದರು.

<><><>

ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಎಂ.ಎಂ ಕಲಬುರ್ಗಿ ಅವರ, 10 ನೇ ಹುತಾತ್ಮ ದಿನಾಚರಣೆ ಹಿನ್ನೆಲೆ, ಇಂದು ಸಂಜೆ 5 ಗಂಟೆಗೆ, ಧಾರವಾಡದ ಆಲೂರ ವೆಂಕಟರಾವ್ ಸಭಾಭವನದಲ್ಲಿ, 'ಸತ್ಯವೆಂಬ ಕೂರಲಗನೆ ಹಿಡಿದು', ಹಾಗೂ 'ಕಲಬುರ್ಗಿ ಕಲಿಸಿದ್ದು' ಕೃತಿ ಬಿಡುಗಡೆ ಕಾರ್ಯಕ್ರಮ ಆಯೋಜಿತವಾಗಿದೆ. ಎಂ.ಎಂ ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ ಈ ಕಾರ್ಯಕ್ರಮ ಆಯೋಜಿಸಿದೆ. ಭಾಷಾ ವಿಜ್ಞಾನಿ, ಪದ್ಮಶ್ರೀ ಜಿ.ಎನ್ ದೇವಿ, ಕೃತಿಗಳನ್ನು ಬಿಡುಗಡೆಗೊಳಿಸಲಿದ್ದಾರೆ ಎಂದು, ಪ್ರತಿಷ್ಠಾನದ ಅಧ್ಯಕ್ಷ ವೀರಣ್ಣ ರಾಜೂರ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಂದ, 106 ಜನ ಪೊಲೀಸ್ ಸಿಬ್ಬಂದಿಗೆ, ಇಂದು, ರಾಷ್ಟ್ರಪತಿ ಹಾಗೂ ಕೇಂದ್ರ ಗೃಹ ಸಚಿವರ, ಪದಕ ಪ್ರದಾನ.

ಪ್ರಧಾನಮಂತ್ರಿ ಜನ ಧನ ಯೋಜನೆ: ಫಲಾನುಭವಿ ಬ್ಯಾಂಕ್ ಉಳಿತಾಯ ಖಾತೆಗೆ, ನೇರ ನಗದು ವರ್ಗಾಯಿಸಲು, ಸಹಕಾರಿ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ, ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಪಟಾಕಿ ಅವಘಡ; ಓರ್ವ ಬಾಲಕ ಸಾವು; 10 ಜನರಿಗೆ  ಗಾಯ.

ಆಕಾಶವಾಣಿಯ ಮನ್ ಕಿ ಬಾತ್; ನಾಳೆ 11 ಗಂಟೆಗೆ, ಪ್ರಧಾನಮಂತ್ರಿ ಅವರಿಂದ, ಮನದ ಮಾತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>